ಸಾಕ್ಷಿದಾರರಿಗೆ ಇಂದು ದಿನಾಂಕಃ 22-06-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಮ್.ಎ.ಎನ್. ವಕೀಲರಿಂದಃ**

2022 ನೇ ಇಸ್ವಿಯಲ್ಲಿ ನಾನು ಆಜಾದ್ ಅರ್ಬನ್ ಕ್ರೆಡಿಟ್ ಸೊಸೈಟಿಯಲ್ಲಿ ಸಹಾಯಕಿ ಆಗಿ ಕೆಲಸ ಮಾಡುತ್ತಿದ್ದೆನು. ನಾನು ಸದರಿ ಸೊಸೈಟಿಯಲ್ಲಿ ತಾತ್ಕಾಲಿಕಾವಾಗಿ ಕೆಲಸ ಮಾಡುತ್ತಿದ್ದೆನು. ನನಗೆ 9 ಸಾವಿರ ರೂಪಾಯಿ ಸಂಬಳ ಕೊಡುತ್ತಿದ್ದರು. ಆರೋಪಿತರು ನನಗೆ ಕಳೆದ 10 ವರ್ಷಗಳಿಂದ ಪರಿಚಯ ಇರುತ್ತಾರೆ, ಅವರು ನಮ್ಮ ತಂದೆಯವರ ಸ್ನೇಹಿತರು. ಪ್ರಸ್ತುತ ಪ್ರಕರಣದಲ್ಲಿ ಆಗಿದೆ ಹೇಳುವ ವ್ಯವಹಾರಕ್ಕಿಂತ ಮುಂಚೆ ನನ್ನ ಮತ್ತು ಆರೋಪಿತರ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ. ಸದರಿ ಸಂಗತಿಯ ಕುರಿತು ನನ್ನ ಫಿರ್ಯಾದಿಯಲ್ಲಿ ಹೇಳಿರುವುದಿಲ್ಲ. ನಿಮ್ಮ ಫಿರ್ಯಾದಿಯಲ್ಲಿ ಮತ್ತು ನೀವು ಕಳುಹಿಸಿದ ನೋಟೀಸಿನಲ್ಲಿ ನಿಮಗೆ ಬೇಕಾದ ಸಂಗತಿಗಳನ್ನು ಸೃಷ್ಟನೆ ಮಾಡಿ ನಮೂದಿಸಿರುತ್ತೀರಿ ಎಂದರೆ ಸರಿಯಲ್ಲ. ಸದರಿಯವುಗಳನ್ನು ನಿಮಗೆ ಬೇಕಾದ ರೀತಿಯಲ್ಲಿ ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ.

2. ಆರೋಪಿತನು ಟೈಲ್ಸ ಅಂಗಡಿ ಹಾಕಿಕೊಂಡಿರುತ್ತಾನೆ ಮತ್ತು ರಿಯಲ್ ಎಸ್ಟೇಟ್ ವ್ಯವಹಾರವನ್ನು ಮಾಡುತ್ತಾನೆ. ಸಾಕ್ಷಿಯು ಮುಂದುವರೆದು ಅವರ ಜಮೀನನ್ನು ಅಭಿವೃದ್ಧಿಪಡಿಸಿ ನಿವೇಶನಗಳನ್ನು ಹಾಕುವ ಕೆಲಸ ಮಾಡುತ್ತಾರೆ ಎಂದು ನುಡಿದಿರುತ್ತಾರೆ. ಅವರ ಜಮೀನು ಎಷ್ಟಿದೆ ಎಂದು ನನಗೆ ಗೊತ್ತಿರುವುದಿಲ್ಲ. ಅವರ ಜಮೀನನ್ನು ಯಾವಾಗ ಅಭಿವೃದ್ಧಿಪಡಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿಯವುಗಳನ್ನು ಯಾವಾಗಿನಿಂದ ಎನ್ ಎ ಮಾಡಿ ಮಾರಾಟ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ. ಈ ಪ್ರಕರಣದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿತರೊಂದಿಗೆ ನಾನು ಕರಾರು ಪತ್ರ ಮಾಡಿಕೊಂಡಿರುವುದಿಲ್ಲ. ನನಗೆ ಹಣಕಾಸಿನ ವ್ಯವಹಾರಿಕ ಜ್ಞಾನ ಇದೆ. ನಾನು ಆದಾಯ ತೆರಿಗೆ ಪಾವತಿಸುವುದಿಲ್ಲ. ನನಗೆ ಬರುತ್ತಿದ್ದ ಸಂಬಳವನ್ನು ಹೊರತುಪಡಿಸಿ ಬೇರೆ ಆದಾಯದ ಮೂಲ ಇರುವುದಿಲ್ಲ. ನಾನು ಆರೋಪಿತನಿಗೆ ಹಣವನ್ನು ಜೂನ್ 2022 ನೇ ಇಸ್ವಿಯಲ್ಲಿ ಕೊಟ್ಟಿರುತ್ತೇನೆ, ತಾರೀಖು ನೆನಪಿರುವುದಿಲ್ಲ. ಸದರಿಯವರಿಗೆ ನನ್ನ ಬಳಿ ಇದ್ದ 3 ಲಕ್ಷ ರೂಪಾಯಿಯ ಎಫ್.ಡಿ.ಯನ್ನು ಮುರಿಸಿ ಕೊಟ್ಟಿರುತ್ತೇನೆ. ಸದರಿಯದ್ದನ್ನು ಜೂನ್ ತಿಂಗಳಿನಲ್ಲಿಯೇ ಮುರಿಸಿದ್ದು, ತಾರೀಖು ನೆನಪಿರುವುದಿಲ್ಲ. ಸದರಿ ಎಫ್.ಡಿ. ನಂಬರ್ ನನಗೆ ನೆನಪಿರುವುದಿಲ್ಲ. ಸದರಿ ಎಫ್.ಡಿ.ಯನ್ನು ಎಷ್ಟು ವರ್ಷದ ಮೊದಲು ಇಟ್ಟಿದ್ದೆನು ಎಂದು ನನಗೆ ನೆನಪಿರುವುದಿಲ್ಲ. ಸದರಿಯದ್ದನ್ನು ಅವಧಿ ಮುಗಿಯುವುದಕ್ಕಿಂತ ಮುಂಚೆ ಮುರಿಸಿದ್ದೆನೋ ಅಥವಾ ಅವಧಿ ಮುಗಿದ ನಂತರ ಮುರಿಸಿದ್ದೆನೋ ಎಂದು ನೆನಪಿರುವುದಿಲ್ಲ.

3. ನಮ್ಮ ತಂದೆಯವರು 2022 ನೇ ಇಸ್ವಿಯ ಮೇ ತಿಂಗಳಲ್ಲಿ ತೀರಿಕೊಂಡಿರುತ್ತಾರೆ. ನಮ್ಮ ಕುಟುಂಬದ ಪದ್ಧತಿಯಂತೆ ಮನೆಯಲ್ಲಿ ಯಾರಾದರೂ ತೀರಿಕೊಂಡಲ್ಲಿ ಒಂದು ತಿಂಗಳ ವರೆಗೆ ಯಾವುದೇ ಹಣಕಾಸಿನ ವ್ಯವಹಾರ ಮತ್ತು ಶುಭ ಕಾರ್ಯವನ್ನು ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ತಂದೆಯವರಿಗೆ ಅವರ ಶಾಲಾ ದಿನಗಳಿಂದ ಪರಿಚಯ ಇರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ. ನಾನು ನೋಡಿದಾಗಿನಿಂದಲೂ ಅವರು ನಮ್ಮ ತಂದೆಯ ಸ್ನೇಹಿತರಾಗಿರುತ್ತಾರೆ. ಅವರಿಬ್ಬರು ಒಳ್ಳೆಯ ಒಡನಾಟದಲ್ಲಿ ಇದ್ದರು ಎಂದರೆ ನಿಜ. ನಮ್ಮ ತಂದೆ ತೀರಿಕೊಂಡಾಗ ನಮ್ಮ ತಾಯಿಯವರನ್ನು ಮತ್ತು ನಮ್ಮನ್ನು ಮಾತನಾಡಿಸಲು ಬಂದಿದ್ದರು. ಆ ರೀತಿ ಬಂದ ನಂತರ ಮತ್ತೆ ಹಣ ಕೇಳಲು ನಮ್ಮ ಮನೆಗೆ ಬಂದಿದ್ದರು. ಆ ರೀತಿ ಬಂದ ದಿನಾಂಕ ನನಗೆ ನೆನಪಿರುವುದಿಲ್ಲ. ಅವರು ನಮ್ಮ ಮನೆಗೆ ಎರಡನೇ ಬಾರಿ ಬಂದ ಎರಡು-ಮೂರು ದಿನಗಳಲ್ಲಿ ಅವರಿಗೆ ಹಣ ಕೊಟ್ಟಿರುತ್ತೇನೆ. ಹಣ ಕೊಡುವಾಗ ನಮ್ಮ ತಾಯಿ ನನ್ನೊಂದಿಗೆ ಇದ್ದರು. ಸದರಿಯವರು ನಮ್ಮ ಬಳಿಯಿಂದ ಪಡೆದ ಹಣ ಮರುಪಾವತಿಸದೇ ಇದ್ದಲ್ಲಿ ನಿಮಗೆ ನಿವೇಶವನ್ನು ಕೊಡುತ್ತೇನೆ ಎಂದು ಹೇಳಿರುತ್ತಾರೆ. ಆ ದಿನ ಅವರ ನಿವೇಶನಗಳನ್ನು ನಾನು ಹೋಗಿ ನೋಡಿರುವುದಿಲ್ಲ. ಆರೋಪಿತನು ಯಾವತ್ತಿಗೂ ನಿವೇಶನ ಕೊಡುತ್ತೇನೆ ಎಂದು ಹೇಳಿ ನಿಮ್ಮ ಬಳಿಯಿಂದ ಹಣ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೇಳಿದ್ದು ಕಲ್ಪಿಸಲಾಯಿತು.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

**ಓ .ಹೇ.ಕೇ. ಸರಿ ಇದೆ**

**-Sd-**

**ಪ್ರ.ದ.ನ್ಯಾ.ದಂ. ಮುಂಡಗೋಡ.**